# ನೇಮಿಚಂದ್ರ



ಚಿತ್ರ: ಡಿ.ಸಿ. ನಾಗೇಶ್

ನೇಮಿಚಂದ್ರ ಅವರು ಹುಟ್ಟಿದ್ದು ಚಿತ್ರದುರ್ಗದಲ್ಲಿ. ಪ್ರಾರಂಭಿಕ ಶಿಕ್ಷಣವನ್ನು ತುಮಕೂರು ಮತ್ತು ಮೈಸೂರುಗಳಲ್ಲಿ ಪಡೆದರು. ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಿಂದ ಬಿ.ಇ. ಪದವಿ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಿಂದ ಎಂ.ಎಸ್. ಪದವಿ ಪಡೆದಿದ್ದಾರೆ. ಪ್ರಸ್ತುತ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್)ನಲ್ಲಿ ಜನರಲ್ ಮ್ಯಾನೇಜರ್ ಹುದ್ದೆಯಲ್ಲಿದ್ದಾರೆ.

ವಿಚಾರಪೂರ್ಣ ಲೇಖನಗಳಿಂದ, ಸೂಕ್ಷ್ಮ ಕತೆ, ಕಾದಂಬರಿಗಳಿಂದ ಸಾಹಿತ್ಯವಲಯದಲ್ಲಿ ಗುರುತಿಸಿಕೊಂಡವರು ನೇಮಿಚಂದ್ರ. ಕತೆಗಾರ್ತಿ, ಅಂಕಣಗಾರ್ತಿ, ಅನುವಾದಕಿಯಾಗಿ ಮಹತ್ವದ ಕೃತಿಗಳನ್ನು ಹೊರತಂದಿದ್ದಾರೆ.

‘ನಮ್ಮ ಕನಸುಗಳಲ್ಲಿ ನೀವಿದ್ದೀರಿ’, ‘ಮತ್ತೆ ಬರೆದ ಕಥೆಗಳು’, ‘ಒಂದು ಶ್ಯಾಮಲ ಸಂಜೆ’ ಅವರ ಕಥಾಸಂಕಲನಗಳು. ‘ನೇಮಿಚಂದ್ರರ ಕಥೆಗಳು’ ಅವರ ಸಮಗ್ರ ಕಥಾಸಂಗ್ರಹ. ‘ನೋವಿಗದ್ದಿದ ಕುಂಚ’ (ಪ್ರಸಿದ್ಧ ಚಿತ್ರಕಾರ ವ್ಯಾನ್‌ಗೊ ಜೀವನ ಚಿತ್ರ), ‘ಬೆಳಕಿನೊಂದು ಕಿರಣ ಮೇರಿ ಕ್ಯೂರಿ’, ‘ಅಸಾಧ್ಯಗಳ ಸಾಧಕ ಥಾಮಸ್ ಆಲ್ವಾ ಎಡಿಸನ್’ ಜೀವನಚರಿತ್ರೆಗಳನ್ನು ಕೂಡ ಅವರು ಪ್ರಕಟಿಸಿದ್ದಾರೆ. ‘ನಿಮ್ಮ ಮನೆಗೊಂದು ಕಂಪ್ಯೂಟರ್’, ‘ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ಸ್’ ಅವರ ವೈಜ್ಞಾನಿಕ ಕೃತಿಗಳಾಗಿವೆ. ‘ಒಂದು ಕನಸಿನ ಪಯಣ’, ‘ಪೆರುವಿನ ಪವಿತ್ರ ಕಣಿವೆಯಲ್ಲಿ’ – ಅವರ ಪ್ರವಾಸ ಕಥನಗಳು. ‘ಯಾದ್ ವಶೇಮ್’ ಅವರ ಕಾದಂಬರಿ.

ಓಡಾಡುತ್ತಿದ್ದಂತೆ, ಪಟಲದ ತುಂಬಾ ಏನೇನೊ ಚಿತ್ರಗಳು ಜಾದೂ ಮಾಡಿದಂತೆ ಮೂಡುತ್ತಿದ್ದವು. ನನ್ನ ಜನ್ಮದಿನಕ್ಕೆ, ಹಬ್ಬ ಹರಿದಿನಕ್ಕೆ ಮುದ್ದಾದ ಗ್ರೀಟಿಂಗ್ ಕಾರ್ಡ್‌ಗಳಿಗೆ ‘ವರ್ಡ್ ಪ್ರಾಸಸರ್’ ನಿಂದ ಹೊರಬಿದ್ದ ವಿವಿಧ ಶೈಲಿಯ ಅಕ್ಷರಗಳಲ್ಲಿ ನನ್ನ ಹೆಸರನ್ನು ಜೋಡಿಸಿ ಕೊಡುತ್ತಿದ್ದ. ನಾನೋ ಪೇಪರಿನಲ್ಲಿ ಪ್ರಿಂಟಾದ ತಲೆಬಹರಗಳಂತೆ ಅವನ್ನೆಲ್ಲ ಜೋಪಾನವಾಗಿ ಕಾದಿರಿಸುತ್ತಿದ್ದೆ. ಸ್ನೇಹಿತರ ಗುಂಪಿನಲ್ಲಿ ಹೆಮ್ಮೆಯಿಂದ ತೋರಿಸುತ್ತಿದ್ದೆ. ನನ್ನ ಹದಿನಾರರ ಬೆರಗು ಕಣ್ಣುಗಳಿಗೆ ರವಿ ಕಂಪ್ಯೂಟರ್ ಬ್ರಹ್ಮನಾಗಿದ್ದ. ಅವ ಎಷ್ಟು ಬುದ್ಧಿವಂತನಾಗಿ ಕಂಡ! ಅವನ ಬೆರಳುಗಳ ಚಮತ್ಕಾರಕ್ಕೆ, ನುಣುಪು ಸ್ಪರ್ಶಕ್ಕೆ ಪಿ.ಸಿ. ಹೇಗೆ ಮಣಿದು ಮಿಡಿಯುತ್ತಿತ್ತು!

★★★

ಈ ರವಿ–

ಹದಿನೆಂಟಕ್ಕೆ ‘ಜಮೀನು ನೋಡಿಕೋ’ ಎಂದು ಪೀಡಿಸಿದ ಅಪ್ಪನ ಮನೆ ಬಿಟ್ಟು ಬೆಂಗಳೂರಿಗೆ ಓಡಿ ಬಂದ ಸಾಹಸಿ! ಒಂದು ಡಿಪ್ಲೊಮಾ ಮಾಡಿ ಮೂರೇ ವರ್ಷದಲ್ಲಿ